International Journal of Kannada Research
www.kannadajournal.com

ISSN: 2454–5813
IJSR 2016; 2(1): 42-44
© 2016 IJKS
www.kannadajournal.com
Received: 16-11-2015
Accepted: 20-12-2015

**ಡಾ. ಚಂದ್ರಾವತಿ ಶೆಟ್ಟಿ**
ಸಹ ಪ್ರಾಧ್ಯಾಪಕರು
ಶ್ರೀ ಶಾರದಾ ಕಾಲೇಜು, ಬಸ್ರೂರು,
ಕರ್ನಾಟಕ, ಭಾರತ

**Correspondence**
**ಡಾ. ಚಂದ್ರಾವತಿ ಶೆಟ್ಟಿ**
ಸಹ ಪ್ರಾಧ್ಯಾಪಕರು
ಶ್ರೀ ಶಾರದಾ ಕಾಲೇಜು, ಬಸ್ರೂರು,
ಕರ್ನಾಟಕ, ಭಾರತ

# ಕುಂದಗನ್ನಡ ಜನಪದ ಐತಿಹ್ಯಗಳ ಸ್ವರೂಪ

**ಡಾ. ಚಂದ್ರಾವತಿ ಶೆಟ್ಟಿ**

**DOI:** https://doi.org/10.22271/24545813.2016.v2.i1a.856

**ಪೀಠಿಕೆ**

ಕುಂದಾಪುರ ಪ್ರದೇಶದ ಜನಪದರು ಆಡುವ ಭಾಷೆ ಕುಂದಗನ್ನಡ ಇದೊಂದು ಪ್ರಾದೇಶಿಕವಾದ ಭಾಷೆ ಕುಂದಗನ್ನಡ ಜನಪದ ಸಾಹಿತ್ಯವು ಕತೆ, ಹಾಡು, ಗಾದೆ, ಒಗಟು, ಐತಿಹ್ಯಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಜನಪದರ ಆಚಾರ–ವಿಚಾರ ಸಂಸ್ಕೃತಿ ಜೀವನ ಕ್ರಮ ಹಾಸು ಹೊಕ್ಕಾಗಿದೆ.

ಕುಂದಗನ್ನಡ ಜನಪದ ಸಾಹಿತ್ಯ ಪ್ರಕಾರದ ಕಂಠಸ್ಥ ಸಂಪ್ರದಾಯದ ಗದ್ಯ ಕಥನಗಳಲ್ಲಿ ಐತಿಹ್ಯವು ಒಂದಾಗಿದೆ. ಇಂಗ್ಲೀಷ್‌ನ 'Legend' ಎಂಬ ಪದಕ್ಕೆ ಸಂವಾದಿಯಾಗಿ ಐತಿಹ್ಯ ರೀತಿಯ ಕಥನವು ಬಳಕೆಯಾಗುತ್ತಿತ್ತು. ಇಲ್ಲಿಯ ಜನಪದರಲ್ಲಿ ಐತಿಹ್ಯದ ಅರ್ಥವ್ಯಾಪ್ತಿ ನಿಘಂಟುಗಳಲ್ಲಿರುವುದಕ್ಕಿಂತ ಸ್ವಲ್ಪ ಮಟ್ಟಿಗೆ ಬೇರೆಯೇ ಆಗಿದೆ. ಕಿವಿಯಿಂದ ಕಿವಿಗೆ ಹರಿದು ಬಂದಿರುವ ಮಾತೊಂದು ಜನತೆಯ ನಂಬುವಂತೆ ಇದ್ದಾಗ ಅದನ್ನು ಇಲ್ಲಿಯ ಜನರು 'ಐತಿಹ್ಯ'ವೆಂದು ಕರೆಯುತ್ತಿದ್ದರು. ಹೀಗೆ ಇತ್ತು ಎಂಬುದು ಇದರ ಸಾಮಾನ್ಯ ಅರ್ಥ. ಐತಿಹ್ಯವು ಇತಿಹಾಸಕ್ಕೆ ಸಮೀಪವರ್ತಿಯಾದುದು.

ಯಾವುದೇ ಒಂದು ಊರು ಅಥವಾ ಯಾವುದೋ ಒಂದು ಸ್ಥಳ ಅಥವಾ ಯಾವುದೇ ಒಂದು ಘಟನೆಯ ಬಗೆಗೆ ಪ್ರಚಲಿತವಿರುವ ಘಟನೆಗಳನ್ನು ಐತಿಹ್ಯ ಎಂದು ಕರೆದುಕೊಳ್ಳಲಾಗಿದೆ. ಅಂದರೆ ಪೂರ್ವಕಾಲದ ಯಾವುದೋ ಒಂದು ಸಣ್ಣ ಚಾರಿತ್ರಿಕ ಘಟನೆಯ ಸುತ್ತ ಅದ್ಭುತವಾದ ಸನ್ನಿವೇಶಗಳು ಬೆಳೆದು ತಲೆಮಾರುಗಳ ಮೂಲಕ ಕಲ್ಪಿತಾಂಶಗಳು ಹರಡಿ ಕಥೆಯಾಗಿ ರೂಪುಗೊಂಡಿದೆ. ಹೀಗಾಗಿ ಐತಿಹ್ಯವು ಇತಿಹಾಸಕ್ಕೆ ಸಮೀಪವರ್ತಿಯಾದದ್ದು ಅಷ್ಟೇ ಅಲ್ಲ ಚರಿತ್ರೆಯಂತೆಯೇ ಇಲ್ಲಿಯೂ ಕೂಡ ಭೌತಿಕ ಆಧಾರವೊಂದನ್ನು ಅದರ ಮೂಲ ಸ್ವರೂಪದಲ್ಲಿಯೇ ನಿರೂಪಿಸಲಾಗಿದೆ.

ಕುಂದಗನ್ನಡ ಜನಪದ ಐತಿಹ್ಯಕ್ಕೆ ನಿರ್ದಿಷ್ಟವಾದ ಅಸ್ತಿತ್ವವಿದೆ. ಕುಂದಗನ್ನಡ ಜನಪದದಲ್ಲಿ ಐತಿಹ್ಯವು ಇತ್ತ ಕಥೆಯಂತೆ ಭ್ರಾಮಕವೂ ಆಗದೆ, ಅತ್ತ ಪುರಾಣದಂತೆ ದೈವಿಕವೂ ಆಗದೆ, ಇರುವ ಒಂದು ವಿಶಿಷ್ಟವಾದ ಸ್ವರೂಪವನ್ನು ಹೊಂದಿದೆ. ಇಲ್ಲಿನ ಐತಿಹ್ಯಗಳು ಪ್ರಾರಂಭದಲ್ಲಿ ಸಂಕ್ಷಿಪ್ತವೂ, ಸರಳವೂ ಆಗಿದ್ದವು. ಕ್ರಮೇಣ ಉತ್ಪ್ರೇಕ್ಷಿತ ವಿವರಣೆಗಳಿಂದ ಕೂಡಿ ದೀರ್ಘವೂ ಕಾಲ್ಪನಿಕವೂ ಆದವು. ಇವುಗಳಲ್ಲಿ ಕಥೆಯ ಜೊತೆಗೆ ವಿವರಣೆಯೂ ಸೇರಿಕೊಂಡಿರುತ್ತದೆ. ಇದನ್ನು ಕಟ್ಟು ಕಥೆಗೆ ಹೋಲಿಸುವ ವಿದ್ವಾಂಸರು ಕಟ್ಟು ಕಥೆಗೆ ಯಾವುದು ಹೊಂದುದಿಲ್ಲವೋ ಅದು ಐತಿಹ್ಯವಾಗುತ್ತದೆ ಎಂದು ಹೇಳಿದ್ದಾರೆ. ಐತಿಹ್ಯಕ್ಕೆ ನಾಜೂಕಾದ ಶೈಲಿ ಇರುವುದಿಲ್ಲ ಅದರ ಚೌಕಟ್ಟು ಒಂದು ತರ್ಕಬದ್ಧ ಸರಪಣಿಗೆ ಕಥನಾಂಶಗಳನ್ನು ಸರಿ ಹೊಂದಿಸಿದಂತಿರುವುದಿಲ್ಲ. ಆದ್ದರಿಂದ ಐತಿಹ್ಯ ತೀರ ಬದಲಾಗುವಂಥದ್ದು ಮತ್ತು ಸ್ಥಳೀಯ ಅಗತ್ಯಗಳಿಗೆ ಪ್ರತಿಕ್ರಿಯಿಸುವಂಥದು. ಈ ಅಗತ್ಯಗಳು ಐತಿಹ್ಯದ ಕಥನಾಂಶಗಳನ್ನು ಅದರ ಸಂದೇಶವನ್ನು ಮಾರ್ಪಡಿಸುತ್ತಾ ಹೋಗುತ್ತದೆ. ಈ ಎಲ್ಲ ಅಂಶಗಳಿಂದ ಐತಿಹ್ಯವೊಂದು ಸ್ಥಳೀಯ ಮಾದರಿಯಾಗಿ ರೂಪುಗೊಂಡುದ್ದೆಂದು ಅಭಿಪ್ರಾಯ ಪಡಬಹುದಾಗಿದೆ.

ಕುಂದಗನ್ನಡ ಜನಪದ ಐತಿಹ್ಯಗಳಲ್ಲಿ ವಸ್ತುವಿದೆಯೋ ಹೊರತು, ನಿರ್ದಿಷ್ಟ ರೂಪವೊಂದು ಇರುವುದಿಲ್ಲ ಐತಿಹ್ಯ ರಂಜನೆಗಾಗಿ ಹೇಳುವಂಥದಲ್ಲ. ಜನರಿಗೆ ಶಿಕ್ಷಣ ಕೊಡಲು ಪ್ರಮುಖ ವಿಷಯವೊಂದನ್ನು ತಿಳಿಸಲು ಮತ್ತು ಅಪಾಯದ ವಿರುದ್ಧ ಜನರು ಸನ್ನದ್ಧವಾಗಿರುವಂತೆ ಎಚ್ಚರಿಸಲು ಇವುಗಳನ್ನು ಹೇಳುವಂತೆ ಕಾಣುತ್ತದೆ. ಐತಿಹ್ಯಗಳು ಸಾಮಾನ್ಯ ಮನುಷ್ಯನ ಅನುಭವಗಳನ್ನು ಕುರಿತು ವ್ಯವಹರಿಸುವಂಥದೆಂಬುದು ಸ್ಪಷ್ಟ ಐತಿಹ್ಯದಲ್ಲಿನ ಪಾತ್ರವೊಂದು ಅದಕ್ಕೆ ಎದುರಾಗುವ ಸಂಗತಿಗಳ ಮುಂದೆ ಅಸಹಾಯಕವಾಗಿ ತೋರುವುದಿದೆ.

ಐತಿಹ್ಯಗಳು ಇದ್ದಕ್ಕಿದಂತೆ ಆರಂಭವಾಗಿ ಇದ್ದಕ್ಕಿದ್ದಂತೆ ನಿಲ್ಲುವಂಥದ್ದು. ಇಲ್ಲಿಯ ಪಾತ್ರ ತನ್ನಿಂದ ತಾನೆ ಕ್ರಿಯಾಶೀಲವಾಗುವಂಥದು; ಜನಪದ ಕಥಾನಾಯಕನ ಹಾಗೆ ಬೇರೊಬ್ಬರ ಅಥವಾ ಬೇರೊಂದರ ಅವಲಂಬನೆಯಲ್ಲಿ ಸಾಗುವಂಥದೇನೂ ಇಲ್ಲ.

ಕುಂದಗನ್ನಡ ಜನದ ಐತಿಹ್ಯಗಳು ಅಸಾಧಾರಣ ವಿಷಯವೊಂದನ್ನು ವಿವರಿಸಬಹುದು ಇಲ್ಲಿವೆ ಸ್ಮರಣೀಯ ಘಟನೆಯೊಂದನ್ನು ನಿರೂಪಿಸಿಬಹುದು. ಒಟ್ಟಿನಲ್ಲಿ ಐತಿಹ್ಯ ನೆನಪಿನಲ್ಲಿ ಉಳಿದು ಬಂದಿರುವಂಥದು ಐತಿಹ್ಯಗಳನ್ನು ಜನಪದ ಕಥೆಗಳಂತೆ ಸಂಗ್ರಹಿಸಲು ಸಾಧ್ಯವಿಲ್ಲ ಐತಿಹ್ಯಗಳನ್ನು ಸಂಭಾಷಣೆ ಮೂಲಕವೇ ಸಂಗ್ರಹಿಸಬೇಕಾಗುತ್ತದೆ. ಸಾಮಾನ್ಯವಾಗಿ ವಿಸ್ತಿರುವುದಾಗಲಿ, ನಯಗೊಳಿಸುವುದಾಗಲಿ ಐತಿಹ್ಯಗಳಲ್ಲಿ ಕಂಡು ಬರುವುದಿಲ್ಲ. ಕೆಲವೊಂದು ವೇಳೆ ವಿಷಯಕ್ಕೆ ನೇರವಾಗಿ ಐತಿಹ್ಯಗಳು ರೂಪಿತಗೊಳ್ಳುತ್ತವೆ.

ಕುಂದಗನ್ನಡ ಜನಪದ ಐತಿಹ್ಯಗಳನ್ನು ವಸ್ತುವಿನ ಮತ್ತು ಪ್ರಸಂಗದ ದೃಷ್ಟಿಗಳಿಂದ ವರ್ಗೀಕರಿಸುತ್ತಾರೆ. ವಸ್ತುವಿನ ದೃಷ್ಟಿಯಿಂದ ಇಲ್ಲಿನ ಐತಿಹ್ಯಗಳನ್ನು ಮೂರು ಗುಂಪುಗಳಾಗಿ ಪರಿಗಣಿಸಬಹುದು ಸೃಷ್ಟಿ ಅಥವಾ ಜಗತ್ತಿನ ಮೂಲವನ್ನು ಕುರಿತ ಐತಿಹ್ಯಗಳು ಅತಿಮಾನುಷ ವ್ಯಕ್ತಿಗಳನ್ನು ಕುರಿತ ಐತಿಹ್ಯಗಳು ಮತ್ತು ಐತಿಹಾಸಿಕ ಐತಿಹ್ಯಗಳು ಭೂಮಿಯ ಸೃಷ್ಟಿ, ಮಾನವನ ಅಸ್ತಿತ್ವ ಮತ್ತು ಪ್ರಾಣಿಗಳ ಹುಟ್ಟು ಮೊದಲಾದ ವಿಷಯಗಳನ್ನು ಮೊದಲ ಭಾಗದ ಐತಿಹ್ಯಗಳು ಹೇಳುತ್ತದೆ. ಕಿನ್ನರ ದೆವ್ವ, ಪಿಶಾಚಿ, ರಾಕ್ಷಸ ಮೊದಲಾದ ಅತಿ ಮಾನುಷ ವಿಷಯಗಳು ಎರಡನೆಯ ಗುಂಪಿನ ಐತಿಹ್ಯಗಳ ವಸ್ತು ಇಡಿಯಾಗಿ ಕಾಲ್ಪನಿಕವಲ್ಲ ಎಂಬುದನ್ನು ಮೂರನೆಯ ಗುಂಪಿನ ಐತಿಹ್ಯಗಳು ತಿಳಿಸುತ್ತವೆ.

ಕುಂದಗನ್ನಡ ಜನಪದ ಐತಿಹ್ಯಗಳ ಪರಿಶೀಲನೆಯಿಂದ ಕೆಲವು ಮುಖ್ಯ ವಿಚಾರಗಳು ನಮ್ಮ ಗಮನಕ್ಕೆ ಬರುತ್ತವೆ. ಐತಿಹ್ಯಗಳ ಒಡಲಿನಿಂದ ಉದ್ದಿಷ್ಟವಾದ ನೀತಿಯೊಂದರ ಪ್ರತಿಪಾದನೆ ಇರುತ್ತದೆ. ಇಂತಹ ಸಂದರ್ಭಗಳಲ್ಲಿ ಮನುಷ್ಯನ ಮನಸ್ಸನ್ನು ಉದಾರಗೊಳಿಸುವ ಪ್ರಯತ್ನ ನಡೆಯುತ್ತದೆ. ಅನೇಕ ಐತಿಹ್ಯಗಳಲ್ಲಿ ಸಾಮಾಜಿಕ ಸಮಸ್ಯೆಗಳೂ ಸಂಘರ್ಷಗಳೂ ರೂಪು ಪಡೆಯುತ್ತದೆ. ಕೆಲವು ಐತಿಹ್ಯಗಳಲ್ಲಿ ಶಿಷ್ಟದ ಕೈವಾಡವಿರುವಂತೆ ಭಾಸವಾಗುವುದು. ಸಮಾಜದಲ್ಲಿನ ಬುದ್ಧಿವಂತರು ಇಂತಹ ಐತಿಹ್ಯಗಳಲ್ಲಿ ಪಾತ್ರವಹಿಸಿರಬೇಕೆಂದು ತೋರುತ್ತದೆ. ಕುಂದಗನ್ನಡ ಜನಪದ ಐತಿಹ್ಯಗಳ ತಳಹದಿ ಮೂಢನಂಬಿಕೆಯೇ ಆಗಿದೆ. ಇಲ್ಲಿನ ಐತಿಹ್ಯಗಳಲ್ಲಿ ವಿಷಯಗಳ ವೈಭವೀಕರಣ ಒಂದು ಸಾಮಾನ್ಯ ಲಕ್ಷಣವಾಗಿದೆ. ಇಲ್ಲಿನ ಸ್ಥಳೀಯ ಐತಿಹ್ಯಗಳು ಜನಪದ ನಿರುಕ್ತಿಗಳಿಂದ ಹೆಚ್ಚು ಪ್ರಭಾವಿತವಾಗಿವೆ. ಜನಪದ ಐತಿಹ್ಯಗಳಲ್ಲಿ ನಿಕ್ಷೇಪ ಅಥವಾ ಗುಪ್ತನಿಧಿ ಕಥೆಗಳಂತೂ ಕುಂದಗನ್ನಡದಲ್ಲಿ ಯಥೇಚ್ಛವಾಗಿ ದೊರೆಯುತ್ತದೆ. ಏಳು ಕೊಪ್ಪರಿಗೆ ಹಣದ ಕಲ್ಪನೆ, ಅದನ್ನು ಏಳು ಹೆಡೆ ಸರ್ಪ ಕಾಯುತ್ತಿರುವ ಚಿತ್ರ ಬಲಿಕೊಡದೆ ಅದು ಸಿಗಲಾರದೆಂಬ ನಂಬಿಕೆ ಹಿಂದೆ ಜನ ಹಣವನ್ನು ಭೂಮಿಯೊಳಗೆ ಬಚ್ಚಿಡುತ್ತಿದ್ದರು ಇಂಥ ಕಥೆಗಳಿಗೆ ಮೂಲವಾಗಿರಲೂಬಹುದು.

ಪ್ರಾಕೃತಿಕ ವೈಚಿತ್ರ್ಯಗಳಿಗೆ ಅಥವಾ ವೈಶಿಷ್ಟಗಳಿಗೆ ವಿವರಣೆ ಕೊಡಲು ಯತ್ನಿಸುವ ವಿವರಣಾತ್ಮಕ ಐತಿಹ್ಯಗಳು ಕುಂದಗನ್ನಡ ಜನಪದ ಐತಿಹ್ಯಗಳಲ್ಲಿ ಹೇರಳವಾಗಿ ಸಿಗುತ್ತವೆ. ಇಂಥ ಐತಿಹ್ಯಗಳಲ್ಲಿ ಸಾಮಾಜಿಕ ಮತ್ತು ಪೌರಾಣಿಕ ಅಂಶಗಳೂ ಕೆಲಸ ಮಾಡುತ್ತವೆ. ಉದಾಹರಣೆಗೆ ಚಂದ್ರನಲ್ಲಿ ಮೊಲವಿದೆಯೆಂದು ಜನಪದರು ಕಲ್ಪಿಸುವುದು. ಹೊಳೆಯುತ್ತಿರುವ ನಕ್ಷತ್ರವೊಂದು ಧ್ರುವ ನಕ್ಷತ್ರವಾಗುವಂಥದ್ದು ಹಾಗೆಯೇ ಏಳು ನಕ್ಷತ್ರಗಳ ಸಮೂಹದ 'ಸಪ್ತರ್ಷಿ ಮಂಡಲ' ಇತ್ಯಾದಿ ಇದೇ ರೀತಿಯಲ್ಲಿ ಗುಡುಗು– ಸಿಡಿಲು ಬಗ್ಗೆ ನಮ್ಮ ಜನಪದರು ಪುರಾಣ ಪುರುಷನಿಂದ ಅರ್ಜುನನ್ನು ಬಳಸಿಕೊಂಡರು ಜನಪದರ ಕಲ್ಪನೆಯಲ್ಲಿ ಅರ್ಜುನನ ರಥದ ಶಬ್ದವೇ ಗುಡುಗು ಬಾಣದ ಹೊಡೆತವೇ ಸಿಡಿಲು ಹೀಗೆ ಪೌರಾಣಿಕ ಸಂಬಂಧವನ್ನು ತಂದು ಅತಿಮಾನುಷಗೊಳಿಸುವುದು ಜನಪದರ ಜಾಯಮಾನವಾಗಿದೆ.

ಕುಂದಗನ್ನಡದ ಕೆಲವೊಂದು ಐತಿಹ್ಯಗಳು ಪ್ರಾಣಿಗಳ ವೈಲಕ್ಷಣಗಳಿಗೆ ಸಂಬಂಧಿಸಿದ ಕಥೆ ಹಾಗೂ ವಿವರಣೆಗಳನ್ನು ಒಳಗೊಂಡಿದೆ. "ಅಳಲಿನ ಮೇಲೆ ಮೂರು ಪಟ್ಟೆಗಳೇಕಿವೆ" ಎಂಬುದು ಪ್ರಸಿದ್ಧವಾದ ಉದಾಹರಣೆಯಾಗಿದೆ. ಶ್ರೀ ರಾಮನು ಸಮುದ್ರಕ್ಕೆ ಸೇತುವೆ ಕಟ್ಟುವ ಸಂದರ್ಭದಲ್ಲಿ ಅಳಿಲೊಂದು ಮಾಡಿದ ಸೇವೆಯೇ ಈ ಕಥೆ. ಅಳಿಲು ಸಮುದ್ರ ತೀರದಲ್ಲಿ ಸ್ನಾನ ಮಾಡಿ ಮರಳಿನಲ್ಲಿ ಉರುಳಾಡುತ್ತದೆ. ಆಗ ಅಲ್ಲಿರುವ ಹೊಯಿಗೆಯೆಲ್ಲ ಅದರ ಮೈಗೆ ಅಂಟಿಕೊಳ್ಳುತ್ತದೆ. ಇದನ್ನು ಶ್ರೀ ರಾಮ ಸೇತುವೆ ಕಟ್ಟಿಸುವ ಜಾಗದಲ್ಲಿ ಹೋಗಿ ಕೊಡವಿ ಬರುತ್ತಿತ್ತಂತೆ. ಇದನ್ನು ಕಂಡ ಶ್ರೀ ರಾಮ ಪ್ರೀತಿಯಿಂದ ಸವರಿದ ಆ ಗುರುತುಗಳೇ ಈ ಪಟ್ಟೆಗಳೆಂದು ವಿವರಿಸುತ್ತಾರೆ. ಈ ಐತಿಹ್ಯಗಳಿಂದಲೇ "ಅಳಿಲು ಸೇವೆ ಮಳಲು ಭಕ್ತಿ" ಎಂಬ ನೀತಿ ವಾಕ್ಯವು ಜನ ಜನಿತವಾಯಿತು.

ಪ್ರಾಣಿಗಳ ವೈಲಕ್ಷಣಗಳಿಗೆ ಸಂಬಂಧಿಸಿದ ಇನ್ನೊಂದು ಕಥೆಯ ರೂಪವನ್ನು ನಾವು ಐತಿಹ್ಯಗಳಲ್ಲಿ ಕಾಣಬಹುದಾಗಿದೆ. ಅದೇನೆಂದರೆ ಸರ್ಪನ ಹೆಡೆಯಲ್ಲಿರುವ ಗುರುತು. ಇದಕ್ಕೆ ಬಸವನ (ನಂದಿಯ) ಪಾದವೆನ್ನುತ್ತಾರೆ. ಇದಕ್ಕೆ ಕಾರಣ ಹಾಗೂ ವಿವರಣೆಯನ್ನು ಸಮುದ್ರ ಮಥನದ ಸಂದರ್ಭದ ಕಥೆಯನ್ನು ಹೇಳಲಾಗಿದೆ. ದೇವತೆಗಳೂ ರಾಕ್ಷಸರು ಸಮುದ್ರವನ್ನು ಮಥಿಸಿದಾಗ ವಿಷ ಉದ್ಭವಗೊಂಡಿರುವುದು ಆ ವಿಷದಲ್ಲಿ ನಿಗದಿಯಾದ ಪ್ರಮಾಣವನ್ನು ಪ್ರತಿಯೊಂದು ಜೀವಿಯೂ ತೆಗೆದುಕೊಳ್ಳಬೇಕೆಂದು ಉಳಿದುದನ್ನು ಶಿವ ಕುಡಿಯಬಹುದೆಂದೂ ತೀರ್ಮಾನಿಸಲಾಯಿತು. ಆಗ ಸರ್ಪ ಶಿವನ ಮೇಲಿನ ಅಭಿಮಾನದಿಂದ ಹೆಚ್ಚು ಕುಡಿದಾಗ, ಶಿವನ ಬಂಟನಾದ ಬಸವನನ್ನು ಕೂಗಿಕೊಂಡನಂತೆ ಹಾವಿನಿಂದ ಹೆಚ್ಚುವರಿ ವಿಷವನ್ನು ಕಕ್ಕಿಸುವ ಸಲುವಾಗಿ ಬಸವ ಅದರ ಹೆಡೆಯ ಮೇಲೆ ಪಾದವನ್ನು ತುಳಿದನಂತೆ ಅದರ ಗುರುತು ಅಲ್ಲಿ ಉಳಿಯಿತೆಂಬುದು ಪ್ರತೀತಿ.

ಕುಂದಗನ್ನಡ ಜನಪದ ಐತಿಹ್ಯಗಳಲ್ಲಿ ಅತಿಮಾನುಷ ಅಂಶದೊಡನೆ ಪುರಾಣ ಪುರುಷರ ಬದುಕನ್ನು ತಮ್ಮ ಬದುಕಿನಂತೆಯೇ ಕಲ್ಪಿಸಿಕೊಂಡು ವಿಚಾರ ಮಾಡಿದ ಅನೇಕ ಐತಿಹ್ಯಗಳು ದೊರಕುತ್ತವೆ. ಮಹಾಭಾರತಕ್ಕೆ ಸಂಬಂಧಿಸಿದ ಒಂದು ಐತಿಹ್ಯವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಪಾಚಿಡವರು ವನವಾಸದ ಕಾಲದಲ್ಲಿ ಇಚಿಥ ಒಂದು ಊರಿನಲ್ಲಿ ನೆಲೆಸಿದ್ದರಂತೆ ಅಡುಗೆ ಮಾಡಲೆಚಿದು ಕುಂತಿ ಕಾರ ಅರೆಯಲು ಭೀಮನಿಗೆ ಗುಂಡುಕಲ್ಲು ತರಲು ಹೇಳಿದಳಚಿತೆ ಭೀಮ ಒಂದು ಬೃಹದಾಕಾರದ ಕಲ್ಲನ್ನು ತಂದುಕೊಟ್ಟನಚಿತೆ ಅದಕ್ಕಾಗಿ ಮುಂದೆ ಆ ಕಲ್ಲು 'ಭೀಮನ ಗುಂಡೆಂದು' ಪ್ರಖ್ಯಾತಿಯನ್ನು ಪಡೆಯಿತ್ತಂತೆ. ಇದರೊಂದಿಗೆ ಕುಂದಗನ್ನಡ ಐತಿಹ್ಯಗಳಲ್ಲಿ ದೇವರುಗಳ ಉದ್ಭವ, ಗುಡಿ ನಿರ್ಮಾಣಗಳನ್ನು ಕುರಿತ ಅನೇಕ ಐತಿಹ್ಯಗಳು ದೊರಕುತ್ತವೆ. ಎಲ್ಲಿಯವರೆಗೆ ದೇವರು ಧರ್ಮದ ಬಗೆಗೆ ಭಯವಿರುತ್ತದೋ ಅಲ್ಲಿಯವರೆಗೆ ಐತಿಹ್ಯಗಳ ಪ್ರಭಾವ ನಿರಂತರವಾಗಿ ಮುಂದುವರಿಯುತ್ತದೆ. ಐತಿಹ್ಯಗಳಲ್ಲಿನ ಅನೇಕ ಸಾಂಸ್ಕೃತಿಕ ಅಂಶಗಳು ಜನಜೀವನದ ಜೊತೆಯಲ್ಲಿ ಸಂಬಂಧ ಬೆಸೆದು ಕೊಂಡಿವೆ. ಇದಕ್ಕೆ ತ್ಯಾಗ: ಬಲಿದಾನದ ಕಥೆಗಳನ್ನೇ ತೆಗೆದುಕೊಳ್ಳುವುದಾದರೆ ನಾಡಿನಾದ್ಯಂತ ಇರುವ ಮಾಸ್ತಿಕಲ್ಲುಗಳೂ, ವೀರಗಲ್ಲುಗಳೂ ಇದನ್ನೆ ಸಾರುತ್ತವೆ. ಪುರಾಣ ಪುರುಷರು ಮತ್ತು ಅವರ ಕಥೆಗಳು ಜನ ಜೀವನದ ಮೇಲೆ ಹೊಂದಿರುವ ಹಿಡಿತವು ಐತಿಹ್ಯಗಳಲ್ಲಿ ಅಭಿವ್ಯಕ್ತಿ ಪಡೆಯುವ್ಯದರಿಂದ, ಸಹಜವಾಗಿಯೇ ಜನರ ಮೇಲಿನ ಅವುಗಳ ಪ್ರಭಾವ ಹೆಚ್ಚಿನದಾಗಿರುತ್ತದೆ.

ಹೀಗೆ ಅನಕ್ಷರತೆ, ಬದಲಾಗದ ಮನೋವೃತ್ತಿ ಹಾಗೂ ಅತಿಮಾನುಷವಾದುದರಲ್ಲಿನ ಅಚಲ ನಂಬಿಕೆಗಳಿಂದಾಗಿ ಐತಿಹ್ಯಗಳು ಇಚಿದೂ ಜನಸಾಮಾನ್ಯರನ್ನು ಆಳುತ್ತಿವೆ. ಅದರಲ್ಲೂ ಕುಂದಗನ್ನಡ ಜನಪದ ಐತಿಹ್ಯಗಳಲ್ಲಿ ಪ್ರಕೃತಿ ವೈಚಿತ್ರ, ದೈವಗಳ ನಂಬಿಕೆ ಸ್ಥಳನಾಮಗಳ ವ್ಯಾಖ್ಯಾನ ಸಾಂಸ್ಕೃತಿಕ, ಸಾಮಾಜಿಕ, ಚಾರಿತ್ರಿಕ ಹಾಗೂ ಪೌರಾಣಿಕ ಸಾಮಾಗ್ರಿಗಳು ಮಡುಗಟ್ಟಿಕೊಂಡಿವೆ.

**ಗ್ರಂಥ ಋಣ**


1. 'ಮದ್ದುಂಟೆ ಜನನ ಮರಣಕ್ಕೆ' ಗುಂಡ್ಮಿ ಚಂದ್ರಶೇಖರ ಐತಾಳ ಆನಂದ ಪ್ರಕಾಶನ –ಮಂಗಳೂರು ೧೯೮೪
2. 'ಜಾನಪದ ಅಧ್ಯಯನ' ಜವರೇ ಗೌಡ ಪ್ರಕಟಣೆ ಡಿ.ವಿ.ಕೆ. ಮೂರ್ತಿ ಮೈಸೂರು ೧೯೭೬
3. ಕ್ಷೇತ್ರ ಅಧ್ಯಯನ ಕುಂದಾಪುರ ಪ್ರದೇಶ ೨೦೧೧.